ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್ ಎನ್ ಎಸ್ — ೧೯

ಸಂಪುಟ ೧ ಸಂಚಿಕೆ ೩೪ ಕೊಪ್ಪ ೧೭-೪-೮೩ ಭಾನುವಾರ · ಬೆಲೆ ೨೦ ಪೈಸೆ

ಕೊಪ್ಪ ಲಯನ್ಸ್ ಪ್ರತಿಷ್ಠಾನ: ೨೨೩ ಜನರಿಗೆ ಉಚಿತ ನೇತ್ರ ಚಿಕಿತ್ಸೆ

ಕೊಪ್ಪ: ಇಲ್ಲಿನ ಲಯನ್ಸ್ ಕ್ಲಬ್ ನವರು ಏ. ೧೦ರಂದು ಏರ್ಪಡಿಸಿದ್ದ ಉಚಿತ ಕಣ್ಣು ಚಿಕಿತ್ಸೆ ಶಿಬಿರದಲ್ಲಿ ೨೨೩ ಜನರು ಮಣಿಪಾಲದ ಕಣ್ಣು ತಜ್ಞರಿಂದ ಚಿಕಿತ್ಸೆ ಪಡೆದರು. ಅವರಲ್ಲಿ ೨೩ ಜನರನ್ನು ಶಸ್ತ್ರಚಿಕಿತ್ಸೆಗಾಗಿ ಕ್ಲಬ್ ನ ಖರ್ಚಿನಲ್ಲಿ ಮಣಿಪಾಲಕ್ಕೆ ಕರೆದೊಯ್ಯಲಾಯಿತು.

ಅಂಚೆ ನೌಕರರ ಅಧಿವೇಶನ

ಕೊಪ್ಪ: ಶೃಂಗೇರಿ, ನ.ರಾ., [illegible] ತಾಲ್ಲೂಕುಗಳೊ ಸೇರಿದಂತೆ ಅಂಚೆ ನೌಕರರ ಸಂಘದ ಕೊಪ್ಪ ಶಾಖೆಯ ಇನೇ ಜಂಟಿ ಸಮ್ಮೇಳನ ಏ. ೧೦ ರಂದು ಇಲ್ಲಿ ನಡೆಯಿತು. ಸಮ್ಮೇಳನಕ್ಕೆ ಮೊದಲು ಶಾಖೆಯ ಮೂಲೆಮೂಲೆಗಳಿಂದ ಬಂದಿದ್ದ ನೂರಾರು ಪ್ರತಿನಿಧಿಗಳು ಪೇಟೆಯಲ್ಲಿ ಮೆರವಣಿಗೆ ನಡೆಸಿದರು.

೧೯೮೩–೮೪ರ ಸಾಲಿಗೆ ಕೆಳಕಂಡವರು ಪದಾಧಿಕಾರಿಗಳಾಗಿ ಆಯ್ಕೆಯಾದರು: ಪಿ.೩: ಬಿ. ಪಿ. ಭಟ್, ಜಯಪುರ (ಅಧ್ಯಕ್ಷ). ಡಿ. ಕೃಷ್ಣಮೂರ್ತಿ, ಶೃಂಗೇರಿ (ಕಾರ್ಯದರ್ಶಿ); ಪಿ–೪: ಬಿ.ವಿ. ಚಂದ್ರಶೇಖರ್, ಜಯಪುರ (ಅಧ್ಯಕ್ಷ), ಜೆ. ಎಸ್. ಎಂ. ಭಟ್, ಕೊಪ್ಪ (ಕಾರ್ಯದರ್ಶಿ)

ಕೊಪ್ಪದಲ್ಲಿ ಹಸಿರುತುಂಡಿನ ಬೃಹತ್ ಸಮಾವೇಶ

ಸಾವಿರಾರು ರೈತರ ಮೆರವಣಿಗೆ, ಸಭೆ

ಕೊಪ್ಪ: ಈವರೆಗೆ ಬಹಳಷ್ಟು ತಣ್ಣಗಿದ್ದ ಈ ತಾಲ್ಲೂಕಿನ ರೈತರು ತಮ್ಮ ಸಂಘಕ್ಕೆ ಜೀವಕಳೆ ತುಂಬಿದ ಬೃಹತ್ ಮೆರವಣಿಗೆ, ಸಭೆ, ಇಲ್ಲಿ ಏ. ೧೭ರಂದು ನಡೆಯಿತು.

ಹತ್ತಾರು ಗಾಡಿ–ಟಿಲ್ಲರ್-ಟ್ರ್ಯಾಕ್ಟರುಗಳ ಹಿಂದೆ ಹಸಿರು ತುಂಡುಗಳ ಸುಮೇಘ [illegible] ಪೇಟೆಯ ರಸ್ತೆಯನ್ನು ತುಂಬಿದರೆ, ಪುರಭವನದ ಆವರಣದಲ್ಲಿ ಸಭೆ ನಡೆಯುವಾಗ ಹಸಿರು ಪ್ರವಾಹ ಆವರಣದಿಂದ ಉಕ್ಕಿ ರಸ್ತೆಯೆಲ್ಲಾ ಹರಿಯಿತು.

ಮುಖಂಡರ ಭಾಷಣ

ಎರಡು ಸಾವಿರದಷ್ಟಿದ್ದ ಬೃಹತ್ ರೈತ ಸಭೆಯನ್ನುದ್ದೇಶಿಸಿ ರಾಜ್ಯ ರೈತ ಸಂಘದ ಹಿರಿಯ ನಾಯಕರುಗಳು ಮಾತನಾಡಿದರು. ರೈತರ ವಿವಿಧ ಬೇಡಿಕೆಗಳನ್ನು ಎಚ್. ಡಿ. ಸುಂದರೇಶ್ ವಿವರಿಸಿದರೆ, ಪ್ರೊ|| ಎಂ. ಡಿ. ನಂಜುಂಡಸ್ವಾಮಿ ರೈತ ಸಂಘಟನೆಯ ರೂಪುರೇಷೆಗಳನ್ನು ಪರಿಚಯ ಮಾಡಿಕೊಟ್ಟರು. ರೈತಸಂಘದ ಅಧ್ಯಕ್ಷ ಹೆಚ್.ಎಸ್. ರುದ್ರಪ್ಪ, ಸ್ವಾತಂತ್ರ್ಯದ ಹೆಸರಲ್ಲಿ ಸರ್ಕಾರಿ ಅಧಿಕಾರಿ–ರಾಜಕಾರಣಿಗಳು ರೈತರನ್ನು ಸುಲಿಯುವುದನ್ನು ಪ್ರತಿಭಟಿಸುವ ಅಗತ್ಯವನ್ನು ಒತ್ತಿ ಹೇಳಿದರು.

ಮಳಿಗೆ ಚಂದ್ರಶೇಖರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಹೊಸ ಸರ್ಕಾರದಲ್ಲಿ ರೈತರ ನಂಬಿಕೆ ಕುಸಿಯುತ್ತಿರುವಂತೆ, ಸರ್ಕಾರದ ಅಸ್ಪಷ್ಟ ಪ್ರಕಟಣೆಗಳ ನಡುವೆಯೇ ಜ[illegible]–ವಸೂಲಿಗಳು ಮುಂದುವರೆಯುತ್ತಿರುವುದು ರೈತ ಸಂಘಟನೆಗೆ ವಿಶೇಷ ಚಾಲನೆ ಕೊಟ್ಟಿರುವಂತೆ ಕಾಣುತ್ತಿದೆ.

ಕೊಟ್ಟಿಗೆಗೆ ಬೆಂಕಿ: ಜಾನುವಾರುಗಳು ಸಾವು

[illegible]ನಳ್ಳಿ: ಇಲ್ಲಿಗೆ ಸಮೀಪದ ಬಿಳು[illegible]ಗೆ ಕಾಡಾಭಟ್ಟ ಎಂಬವರ ಮನೆಯಲ್ಲಿ ಈಚೆಗೆ ಕೊಟ್ಟಿಗೆಗೆ ಬೆಂಕಿಬಿದ್ದು ೩ ಸಾವಿರ ರೂ. ಬೆಲೆಯ ಒಂದು ಜೊತೆ ಗಾಡಿ ಎತ್ತುಗಳು ಬೆಂದುಹೋದುದಾಗಿ ಗೊತ್ತಾಗಿದೆ. ಊರವರೆಲ್ಲ ಸೇರಿ, ಬೆಂಕಿ ಮನೆಗೆ ತಗಲದಂತೆ ರಕ್ಷಿಸಿದ್ದಲ್ಲದೆ, ಬೇರೆ ದನಕರುಗಳನ್ನು ಪಾರು ಮಾಡಿದರೂ ಈ ಎತ್ತುಗಳನ್ನು ರಕ್ಷಿಸುವ ಪ್ರಯತ್ನ ಸಫಲವಾಗಲಿಲ್ಲವೆನ್ನಲಾಗಿದೆ.

ತಾ|| ನ ಉನ್ನತ ಅಧಿಕಾರಿಗಳು ಸ್ಥಳ ಮಹಜರು ನಡೆಸಿ ಪರಿಹಾರದ ಬಗ್ಗೆ ದಾಖಲೆ ಸಿದ್ಧಪಡಿಸುತ್ತಿದ್ದಾರೆಂದು ಹೇಳಲಾಗಿದೆ. (ವರದಿ: ಹೆಗ್ಗಾರು ಜಯಂತ್.)

ಕೊಪ್ಪ, ಜಯಪುರಗಳಲ್ಲಿ ಲ್ಯಾಪ್ರೊಸ್ಕೊಪಿಕ್ ಶಿಬಿರ

ಕೊಪ್ಪ: ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಏ. ೨೯ರಂದು ಹಾಗೂ ಜಯಪುರದಲ್ಲಿ ಏ. ೨೮ರಂದು ಉದರದರ್ಶಕ ಸಂತಾನಹರಣ ಶಸ್ತ್ರ ಚಿಕಿತ್ಸೆ ಶಿಬಿರಗಳು ನಡೆಯುತ್ತವೆ. ಅರ್ಹ ದಂಪತಿಗಳು ಇದರ ಪ್ರಯೋಜನ ಪಡೆಯಬೇಕೆಂದು ವೈದ್ಯಾಧಿಕಾರಿ ಡಾ|| ಎ. ಜೆ. ರಂಗನಾಥ್ ಕೋರಿದ್ದಾರೆ.

ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವವರಿಗೆ ಕೊಡುವ ಪ್ರೋತ್ಸಾಹಧನವನ್ನು ಈಗ ೧೫೦ರೂ.ಗಳಿಗೆ ಹೆಚ್ಚಿಸಲಾಗಿದೆ. ವಾಹನ ಸೌಕರ್ಯ ಒದಗಿಸಿದರೆ ೧೫ರೂ. ಮುರಿದುಕೊಳ್ಳಲಾಗುತ್ತದೆ.

"ಟಾರ್ ಕೆಲಸ ಅಸಮರ್ಪಕ"

—ಭಾಜಪ ಆರೋಪ

ಕೊಪ್ಪ: ಇಲ್ಲಿನ ಕೆಲವು ರಸ್ತೆಗಳಿಗೆ ಟಾರು ಹಾಕುವ ಕೆಲಸ ನಡೆಯುತ್ತಿದ್ದು, ಅದು ಅಸಮರ್ಪಕವಾಗಿದೆಯೆಂದು ಭಾರತೀಯ ಜನತಾಪಕ್ಷದ ಕೊಪ್ಪ ನಗರ ಸಮಿತಿ ಆರೋಪಿಸಿದೆ.

ಟಾರಿನ ಪ್ರಮಾಣದಲ್ಲಿ ಖೋತ, ಟಾರು ಜಲ್ಲಿಯನ್ನು ಸರಿಯಾಗಿ ಮಿಶ್ರಮಾಡದಿರುವುದು, ಮಿಶ್ರಣವನ್ನು ಒತ್ತಾಗಿ ಹರಡದಿರುವುದು, ಟಾರ್ ಹಾಕಿರುವ ರಸ್ತೆಯ ಅಗಲ ಕಮ್ಮಿ ಮಾಡಿರುವುದು, ಹೊಂಡ-ತಗ್ಗುಗಳು ನಿವಾರಣೆಯಾಗುವಂತೆ ಹರಡದಿರುವುದು ಮುಂತಾದ ಹಲವು ದೋಷಗಳನ್ನು ಪಟ್ಟಿಮಾಡಿ ಪುರಸಭೆಗೆ ಸಲ್ಲಿಸಲಾಗಿದೆ.

'ಪುರಸಭೆ ಅಸಹಾಯಕ'?

"ಟಾರು ಕೆಲಸಕ್ಕೆ ಲೋಕೋಪಯೋಗಿ ಇಲಾಖೆ ನಿಗದಿ ಮಾಡಿರುವ ಅಂದಾಜು ಬಹಳ ಕಮ್ಮಿಯಿದೆಯೆಂದೂ, ಅದನ್ನು ಶೇ. ೧೫ ರಷ್ಟಾದರೂ ಏರಿಸಬೇಕೆಂದೂ ಕಂಟ್ರಾಕ್ಟರುಗಳು ಕೇಳುತ್ತಿದ್ದಾರೆ. ೩ಬಾರಿ ಟೆಂಡರ್ ಕರೆದಾಗಲೂ ಯಾರೂ ಅರ್ಜಿ ಹಾಕದೆ ಬಹಳ ಕಷ್ಟದಿಂದ ಈಗಿನ ಕಂಟ್ರಾಕ್ಟ್ ವಹಿಸಿದ್ದಾಗಿದೆ. ಹೆಚ್ಚು ಕಟ್ಟುನಿಟ್ಟು ಮಾಡಿದರೆ ಕಂಟ್ರಾಕ್ಟ್ ಮುರಿದು, ಕೆಲಸವೇ ನಿಲ್ಲಬಹುದು. ನಿಮ್ಮ ಕಡೆಯವರ್ಯಾರಾದರೂ ಸಮರ್ಪಕವಾಗಿ ಕೆಲಸ ನಿರ್ವಹಿಸಲು ತಯಾರಿದ್ದಲ್ಲಿ ಈಗಲೂ ಕೆಲಸ ವಹಿಸಲು ಸಿದ್ಧ. ಟಾರು ಹಾಕಿ ೨ ದಿನವಾದರೂ ವಾಹನ ಸಂಚರಿಸದಿದ್ದರೆ ಹಾಕಿದ್ದು ಸರಿಯಾಗಿ ಕೂರುತ್ತದೆ. ಆದರೆ ಜನ ನಮ್ಮ ಮಾತು ಕೇಳುವುದಿಲ್ಲ. ವಾಹನ ಓಡಿಸುತ್ತಾರೆ ...." ಮುಂತಾಗಿ ಪುರಸಭಾ ಮುಖ್ಯಾಧಿಕಾರಿಗಳು 'ಅಸಹಾಯಕತೆ' ತೋಡಿಕೊಂಡಿದ್ದಾಗಿ ಭಾಜಪ ನಗರಸಮಿತಿ ಕಾರ್ಯದರ್ಶಿ ಜೆ.ಕೆ. ವಿಜಯಕುಮಾರ್ ತಿಳಿಸಿ, ಈ ಬಗ್ಗೆ ಪೋಲೀಸ್ ರಕ್ಷಣೆ ಕೇಳಲು ಸಮಿತಿ ಸಲಹೆ ಮಾಡಿದೆಯೆಂದಿದ್ದಾರೆ.

ಈ "ಅಸಹಾಯಕತೆ"ಗಳ ಬಗ್ಗೆ ಮೇಲಧಿಕಾರಿಗಳಿಗೆ ಪತ್ರ ಬರೆದು ಪರಿಹಾರ ಮಾರ್ಗ ಹುಡುಕಲು ಪ್ರಯತ್ನಿಸುತ್ತಿರುವುದಾಗಿಯೂ ಅವರು ತಿಳಿಸಿದ್ದಾರೆ.

ಪಶುವೈದ್ಯಶಾಲೆ ಉದ್ಘಾಟನೆ

ನಾರ್ವೆ: ಏ. ೧೧ ರಂದು ನಡೆದ ಸಮಾರಂಭದಲ್ಲಿ ಶೃಂಗೇರಿ ಕ್ಷೇತ್ರದ ಶಾಸಕ ಹೆಚ್. ಜಿ. ಗೋವಿಂದಗೌಡರು ಇಲ್ಲಿನ ಪಶುವೈದ್ಯಶಾಲೆಯ ಆರಂಭೋತ್ಸವ ನೆರವೇರಿಸಿದರು. ಇದಕ್ಕಾಗಿ ರಾ.ಗ್ರಾ.ಉ. ಯೋಜನೆಯಲ್ಲಿ ಹೊಸದಾಗಿ ನಿರ್ಮಿಸಿದ ಕಟ್ಟಡವನ್ನು ಅರಣ್ಯಾಧಿಕಾರಿ ಕೆ. ಸುಂದರನಾಯ್ಕ ಉದ್ಘಾಟಿಸಿದರು. ಬಿ. ಜಿ. ಚಿದಂಬರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಉಪವಿಭಾಗಾಧಿಕಾರಿ ಕೆ. ನರಸಿಂಹಯ್ಯ ಹಾಗು ಪಶುವೈದ್ಯ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಬಿ. ರಾಧಾಕೃಷ್ಣ ಮುಖ್ಯ ಅತಿಥಿಗಳಾಗಿದ್ದರು.

ಓದುಗರಲ್ಲಿ—

ಮುದ್ರಣದ ಸಮಸ್ಯೆಯ ಕಾರಣ ಈ ವಾರವೂ ಪತ್ರಿಕೆ ಎರಡೇ ಪುಟದ್ದಾಗಿದೆ. ಆದಷ್ಟು ಬೇಗ ಮಾಮೂಲಿನಂತೆ ಮಾಡಲು ಪ್ರಯತ್ನಿಸುತ್ತಿದ್ದೇವೆ. —ಸಂ.

ದರ್ಖಾಸ್ತು ಜಮೀನು ವಿವಾದ:

ಶಾಸಕರ ಸಮ್ಮುಖದಲ್ಲಿ ಚರ್ಚೆ, ಒಪ್ಪಂದ

ಕೆಲ್ಲುಗುಡ್ಡೆ: ಈ ಗ್ರಾಮದ ಸರ್ಕಾರಿ ಕಾಡು ಹಾಗೂ ಗೋಮಾಳಗಳಲ್ಲಿ ಕೊಪ್ಪದ ಲೋಕೋಪಯೋಗಿ ಇಲಾಖೆ ನೌಕರ ಹನುಮಂತಪ್ಪ ಎಂಬವರು ತಮ್ಮ ಹಾಗೂ ಕುಟುಂಬವರ್ಗದವರ ಹೆಸರಿನಲ್ಲಿ ದರ್ಖಾಸ್ತಿಗಾಗಿ ಪ್ರಯತ್ನಿಸಿರುವುದನ್ನು ಸ್ಥಳೀಯ ವಿವೇಕಾನಂದ ಯುವಕ ರೈತ ಸಂಘದ ನೇತೃತ್ವದಲ್ಲಿ ಗ್ರಾಮಸ್ಥರು ಪ್ರತಿಭಟಿಸುತ್ತಿದ್ದು, ಈಚೆಗೆ ಈ ಸಮಸ್ಯೆಗೊಂದು ಪರಿಹಾರವನ್ನು ಕಂಡುಕೊಳ್ಳಲಾಗಿದೆಯೆಂದು ತಿಳಿದುಬಂದಿದೆ.

ಕಳೆದ ವಾರ ಶಾಸಕರು ಮತ್ತು ತಾ. ಅ. ಮಂ. ಅಧ್ಯಕ್ಷರ ಸಮ್ಮುಖದಲ್ಲಿ ಗ್ರಾಮಸ್ಥರ ಪ್ರತಿನಿಧಿಗಳು ತಹಸೀಲ್ದಾರರೊಂದಿಗೆ ಮಾತುಕತೆ ನಡೆಸಿದರು. ಗ್ರಾಮದಲ್ಲಿ ಜಮೀನಿಗಾಗಿ ಹರಿಜನ-ಗಿರಿಜನ ಮುಸ್ತಿತರ ಬಡವರು ಬಹಳ ಕಾಲದಿಂದ ಸಲ್ಲಿಸಿರುವ ಅಂತಹ ಹೆಚ್ಚು ಅರ್ಜಿಗಳಿಗೆ ಮುಂಜೂರಾತಿ ಹಾಗೂ ಸೊಪ್ಪಿನಬೆಟ್ಟ, ಗೋಮಾಳ ಮುಂತಾದ ಗ್ರಾಮದ ಹಿತಾಸಕ್ತಿ [illegible] ಪೂರೈಸಿದ ಮೇಲೆ ಜಮೀನು ಹಂಚಿಕೆಗೆ ಉಳಿದರೆ ಮಾತ್ರ ಸದರಿ ಅರ್ಜಿದಾರನಿಗೆ ನೀಡುವುದಾಗಿ ತಹಸೀಲ್ದಾರ್ ಒಪ್ಪಿಕೊಂಡಿದ್ದಾರೆಂದು ಸಂಘದ ಪತ್ರಿಕಾ ಪ್ರಕಟಣೆ ತಿಳಿಸಿದ್ದಾರೆ.

[illegible]

ಜಿಲ್ಲಾಧಿಕಾರಿಗೆ ವರ್ಗ

[illegible]

ಓದುಗರ ಪತ್ರಗಳು

ಲಾಠಿ ಚಾರ್ಜ್ ಗಣಮಗನಿಗೋ ದೇವರಿಗೋ?

ಇದೇ ತಿಂಗಳು ೫ರಂದು ನರಸಿಂಹರಾಜಪುರದಲ್ಲಿ ನಡೆದ ಕೋಟಿ ಮಾರಮ್ಮನ ಜಾತ್ರೆ ಉತ್ಸವದಲ್ಲಿ ಮಾರಿಗೆ ಕೋಣ ಅರ್ಪಿಸುವುದಕ್ಕೆ, ಇಲ್ಲಿಯ ಆರಕ್ಷಕ ದಳದವರು ಕೋಣ ಕಡಿಯಕೂಡದೆಂದು (ಕಾನೂನಿಗೆ ಅನುಗುಣವಾಗಿ) ಹಿಡಿದಿಟ್ಟದ್ದರು ಅಮ್ಮನವರ ಉತ್ಸವ ಠಾಣೆ ಎದುರು ಬಂದಾಗ, ಜನ ಕೋಣ ಬಿಟ್ಟುಕೊಡುವಂತೆ ಸ್ಟೇಷನ್ ಎದುರು ಘೇರಾಯಿಸಿದರು. ಠಾಣೆಯ ಒಳಗೆ ಜಾತ್ರೆಯ ಅಧ್ಯಕ್ಷರಿಗೂ ಮತ್ತು ಪೋಲೀಸ್ ಮುಖ್ಯಾಧಿಕಾರಿಗೂ ಈ ಬಗ್ಗೆ ಬಹಳ ಹೊತ್ತು ಚರ್ಚೆ ನಡೆದು, ನಂತರ ಕೋಣವನ್ನು ಬಿಟ್ಟುಕೊಟ್ಟರು. ಇಷ್ಟರಲ್ಲೇ ಸಹನೆ ಕಳೆದುಕೊಂಡ ಜನ ಠಾಣೆಯ ಮುಂಭಾಗದ ಬೋರ್ಡನ್ನು ಕಿತ್ತುಹಾಕಿ, ಗಲಾಟೆ ಮಾಡಿದರು. ಮುನ್ನೆಚ್ಚರಿಕೆಯ ಕ್ರಮವಾಗಿ ಪೋಲೀಸರು ಲಾಠಿಚಾರ್ಜು ಮಾಡಿದರು. ಗಣಮಗನೂ ಲಾಠಿ ಏಟನ್ನು ತಿಂದು ಮನೆಗೆ ಓಡಿದನು. ಮೈಮೇಲೆ ಬರುವ ದೇವರು ಅವನನ್ನು ರಕ್ಷಿಸಬಹುದಿತ್ತಲ್ಲ? ದೇವರು ಮೈಮೇಲೆ ಬರುವುದು ಸುಳ್ಳೆ? ಮೈಮೇಲೆ ಬಂದಿದ್ದರೆ, ಲಾಠಿ ಚಾರ್ಜ್ ಆದದ್ದು ಗಣಮಗನಿಗೋ ದೇವರಿಗೋ? ಎಂಬುದು ಕುತೂಹಲಕರ ಅಲ್ಲವೇ?

—ಮಹಾಬಲ, ನ. ರಾ. ಪುರ

ಯಕ್ಷಗಾನ ನೋಡುವವರ ಮಧ್ಯೆ, ಕಾಲೆಡವುವವರು!

ಮಾರ್ಚ್ ೩೦ ರ ರಾತ್ರಿ ಶೃಂಗೇರಿಯಲ್ಲಿ ಇಡಗುಂಜಿ ಮೇಳದವರ ಆಟಕ್ಕೆ ಹೋದವರಲ್ಲಿ ನಾನೂ ಒಬ್ಬ. ಮಧ್ಯೆ ರಸವತ್ತಾದ ಸನ್ನಿವೇಶದಲ್ಲಿ ಭಂಗವುಂಟಾಗುವಂತೆ ಅಪರಿಚಿತ ಮಹಿಳೆಯೊಬ್ಬರು ಕಾಲೆಡವಿದಂತೆ ನನ್ನ ಮೇಲೆ ಬಿದ್ದರು. ಹೀಗೇ ಆಗಾಗ ಕೆಲವು ಮಹಿಳೆಯರು ಪುರುಷರ ಮಧ್ಯೆ ಓಡಾಡುತ್ತಾ ಕಾಲೆಡವುವ ಅಭ್ಯಾಸದವರೆಂದು ಬೇರೆಯವರಿಂದ ತಿಳಿಯಿತು. ಇಂಥ ಅಸಭ್ಯತೆಯಿಂದ ಆಗುವ ತೊಂದರೆ, ಅಪಾಯಗಳನ್ನು ವಿವರಿಸಬೇಕಾಗಿಲ್ಲ.

ಆದ್ದರಿಂದ ಇನ್ನು ಮುಂದೆ ಆಟಕ್ಕೆ ಪರವಾನಗಿ ಕೊಡುವಾಗ ಪುರಸಭೆ ಮತ್ತು ಆರಕ್ಷಕರು ಸ್ತ್ರೀಪುರುಷರಿಗೆ ಪ್ರತ್ಯೇಕ ಆಸನ ವ್ಯವಸ್ಥೆ ಏರ್ಪಡಿಸಬೇಕೆಂಬ ಶರತ್ತು ವಿಧಿಸಬೇಕೆಂದು ಕೋರುತ್ತೇನೆ.

ಎನ್. ಟಿ. ಪದ್ಮನಾಭ ಹೆಗ್ಡೆ
ಶೃಂಗೇರಿ.

ಕಿಗ್ಗಕ್ಕೆ ಟೆಲಿಫೋನ್ ಬೇಕು

ಮರ್ಕಲ್ ಪಂಚಾಯ್ತಿ ವ್ಯಾಪ್ತಿಯಲ್ಲಿ ೨೦೦೦ ಜನಸಂಖ್ಯೆ ಇದ್ದು, ಕಿಗ್ಗಕ್ಕೆ ಸಾರ್ವಜನಿಕ ಟೆಲಿಫೋನ್ ಸೌಲಭ್ಯಬೇಕು ಎಂಬುದು ಗ್ರಾಮಸ್ಥರ ಬೇಡಿಕೆ.

ಕೊಳವೆ ಬಾವಿ ಕೆಟ್ಟಿದೆ

ಕೊಪ್ಪ ತಾ|| ಕುಣಿಮಕ್ಕಿ ಗ್ರಾಮದ ನಾರ್ವೆ ಕೈಮರದಲ್ಲಿರುವ ಕೊಳವೆ ಬಾವಿ ಕೆಟ್ಟುಹೋಗಿದ್ದು ಜನರಿಗೆ ತುಂಬ ತೊಂದರೆಯಾಗುತ್ತಿದೆ. ಸಂಬಂಧಪಟ್ಟವರು ಅದನ್ನು ಆದಷ್ಟು ಬೇಗ ರಿಪೇರಿ ಮಾಡಿಸಬೇಕೆಂದು ಎಸ್. ಎ. ಪುರುಷೋತ್ತಮ ವಿನಂತಿಸಿದ್ದಾರೆ.

ಕೊಗ್ರೆ–ಹೆಗ್ಗಾರುಕುಡಿಗೆ ಮಾರ್ಗ

ಕೊಗ್ರೆ–ಹೆಗ್ಗಾರುಕುಡಿಗೆ ನಡುವೆ ಸಂಪರ್ಕ ಕಲ್ಪಿಸುವ ಲೋಕೋಪಯೋಗಿ ಇಲಾಖೆಯ ರಸ್ತೆಯೊಂದು ದುರಸ್ತಿಯಿಲ್ಲದೆ ವಾಹನ ಸಂಚಾರಕ್ಕೆ ಅಯೋಗ್ಯವಾಗಿದೆಯಂತೆ. ಇದರಿಂದಾಗಿ ಬಸ್ ಸೌಕರ್ಯ ಕೇಳಲು ಸಾಧ್ಯವಾಗುತ್ತಿಲ್ಲ. ಇಲಾಖೆ ಕೂಡಲೇ ಗಮನಹರಿಸಲಿ ಎಂಬುದು ಅಲ್ಲಿನವರ ಮನವಿ.

ಸಭೆ-ಸಮಾರಂಭಗಳು

ಗಂಡಗಟ್ಟ

ಇಲ್ಲಿನ ಸೆ||ಹಿ||ಪ್ರಾ||ಶಾಲೆ ಮತ್ತು ಹಳೇ ವಿದ್ಯಾರ್ಥಿ ಸಂಘಗಳ ವಾರ್ಷಿಕೋತ್ಸವ ಏ. ೧೧ರಂದು ಕೆ. ಪಿ. ಪ್ರೇಮನಾಥ್ ಅಧ್ಯಕ್ಷತೆಯಲ್ಲಿ ನಡೆಯಿತು. ಶಾಸಕ ಗೋವಿಂದ ಗೌಡರು ಮುಖ್ಯ ಅತಿಥಿಗಳಾಗಿದ್ದರು.

ಹೆಗ್ಗಾರುಕುಡಿಗೆ

ಇಲ್ಲಿ ಏ. ೮ರಂದು ಯುವಕ ರೈತ ಸಂಘದ ವಾರ್ಷಿಕೋತ್ಸವ ಬಿ. ಜಿ. ಚಿದಂಬರ್ ಅಧ್ಯಕ್ಷತೆಯಲ್ಲಿ ನಡೆಯಿತು. ಅತಿಥಿಗಳಾದ ಶಾಸಕ ಗೋವಿಂದಗೌಡರು ಪ್ರತಿಭಾವಂತ ಯುವ ಕಲಾವಿದ ಬಲೆಗೋಡು ನಾಗೇಶ್‌ರನ್ನು ಹಾರಹಾಕಿ ಸನ್ಮಾನಿಸಿದರು.

ಸೋಮಲಾಪುರ

ಇಲ್ಲಿನ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವ ಏ. ೮ರಂದು ನಡೆಯಿತು. ಡಾ|| ಎಸ್. ಎಂ. ಶಾನಭಾಗ್, ಶಿರೀಶ್ ಗುರ್ಜರ್, ಜಗನ್ನಾಥ್, ಆದಿತ್ಯ ಮುಖ್ಯ ಅತಿಥಿಗಳಾಗಿದ್ದರು. ಇದೇ ಸಂದರ್ಭದಲ್ಲಿ ಕೊಪ್ಪದ ಲಯನ್ಸ್‌ಕ್ಲಬ್ ಶಾಲೆಯ ಬಡ ಮಕ್ಕಳಿಗೆ ನೀಡಿದ ೧೭ ಜೊತೆ ಬಟ್ಟೆಗಳನ್ನು ಡಾ| ಶಾನಭಾಗ್ ಹಂಚಿದರು.

ಅಡ್ಡಗದ್ದೆ

ಇಲ್ಲಿನ ಹಿ||ಪ್ರಾ ಶಾಲೆ ಮತ್ತು ವಿನಾಯಕ ಕಲಾಸಂಘದ ವಾರ್ಷಿಕೋತ್ಸವ ಏ. ೩ ರಂದು ಕೆ. ಎಸ್. ಶ್ರೀನಿವಾಸರಾವ್ ಅಧ್ಯಕ್ಷತೆಯಲ್ಲಿ ನಡೆಯಿತು. ಕ್ಷೇತ್ರಾಭಿವೃದ್ಧಿ ಅಧಿಕಾರಿ ಕೆ. ಅನಂತಮೂರ್ತಿ ಮುಖ್ಯ ಅತಿಥಿಯಾಗಿದ್ದರು. ಪ್ರೌಢಶಾಲಾ ಶಿಕ್ಷಕ ಎಂ. ಆರ್. ಚಿನ್ನಪ್ಪ ಮಕ್ಕಳಿಗೆ ಬಹುಮಾನ ಹಂಚಿದರು.

ಏ. ೪ರಂದು ನಿವೇದಿತಾ ಯುವತಿ ಮಂಡಳಿ ಮತ್ತು ಹವ್ಯಾಸಿ ಕಲಾಸಂಘಗಳ ವಾರ್ಷಿಕೋತ್ಸವ ಜಿ. ಟಿ. ರಾಮಣ್ಣಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರೌಢಶಾಲಾ ಮುಖ್ಯೋಪಾಧ್ಯಾಯ ಟಿ. ಆರ್. ಜಯರಾಂ ಮುಖ್ಯ ಅತಿಥಿಯಾಗಿದ್ದರು. ಶಿವರಾಂ ಮೂಕವಾದನಗಳನ್ನು ಪ್ರದರ್ಶಿಸಿದರು.

ಅಷ್ಟಬಂಧ

ಶೃಂಗೇರಿ: ವಿದ್ಯಾರಣ್ಯಪುರದಲ್ಲಿ ಸದಾಶಿವದೇವರ 'ಅಷ್ಟಬಂಧ' ಕಾರ್ಯಕ್ರಮ ಮಾ. ೨೮ರಂದು ಹರಿಹರಪುರ ಗುರುಗಳ ಅನುಗ್ರಹದಿಂದ ನೆರವೇರಿತು. ೨೮ ರಂದು ದಿಂಡಿ ಉತ್ಸವ ನಡೆಯಿತು.

ಗುಡ್ಡೇತೋಟ

ಇಲ್ಲಿನ ಮೈತ್ರಿ ಮಹಿಳಾ ಸಮಾಜದ ವಾರ್ಷಿಕ ಸಭೆ ಏ. ೧ ರಂದು ನಡೆದು, ೧೯೮೩ನೇ ಸಾಲಿಗೆ ಈ ಕೆಳಕಂಡವರು ಪದಾಧಿಕಾರಿಗಳಾಗಿ ಆಯ್ಕೆಯಾದರು: ಪದ್ಮಾ ಅನಂತರಾವ್ (ಅಧ್ಯಕ್ಷೆ), ಜಲಜಾಕ್ಷಿ ರಘುಪತಿರಾವ್ (ಉಪಾಧ್ಯಕ್ಷೆ), ಜಿ. ಟಿ. ನಾಗರತ್ನ (ಕಾರ್ಯದರ್ಶಿ), ಜಿ. ವಿ. ನಾಗರತ್ನ (ಸಹಕಾರ್ಯದರ್ಶಿ).

ಶೃಂಗೇರಿಯಲ್ಲಿ ರಾಮನವರಾತ್ರಿ

ಶೃಂಗೇರಿ: ಇಲ್ಲಿನ ಶಂಕರಮಠದಲ್ಲಿ ಏ. ೧೮ರಂದು ಜಗದ್ಗುರುಗಳ ೩೩ನೇ ವರ್ಧಂತಿ ಉತ್ಸವ ನಡೆಯುತ್ತದೆ. ಅಲ್ಲದೆ ೧೪ ರಿಂದ ಏರ್ಪಟ್ಟಿರುವ ಶ್ರೀರಾಮ ವಸಂತ ನವರಾತ್ರಿ ಉತ್ಸವ ಏ. ೨೨ರವರೆಗೂ ನಡೆಯುತ್ತದೆ. ಪ್ರತಿ ಸಂಜೆ ಖ್ಯಾತ ಕಲಾವಿದರ ಸಂಗೀತ ಗೋಷ್ಠಿಗಳಿರುತ್ತವೆ.

ಅಭ್ಯರ್ಥಿಗಳಿಗೆ ವಯೋಮಿತಿ ಏರಿಕೆ: ಸರ್ಕಾರದ ಕ್ರಮ

ರಾಜ್ಯದಲ್ಲಿ ಸರ್ಕಾರಿ ಹುದ್ದೆಗಳಿಗೆ ಅರ್ಜಿ ಹಾಕುವವರಿಗೆ ಗರಿಷ್ಠ ವಯೋಮಿತಿಯನ್ನು ೩ ವರ್ಷ ಹೆಚ್ಚಿಸಲಾಗಿದೆ. ೩ ವರ್ಷಗಳಿಂದ ಸರ್ಕಾರದ ಸಾಮಾನ್ಯ ಹುದ್ದೆಗಳಿಗೆ ನೇಮಕ ನಡೆಯುದಿರುವುದರಿಂದ ಈ ಕ್ರಮ. ಈ ರಿಯಾಯ್ತಿ ೨ ವರ್ಷಗಳವರೆಗೆ ಮಾತ್ರ. (ಅನಂತರ ಗರಿಷ್ಠ ವಯೋಮಿತಿ ಮೊದಲಿದ್ದಂತೆಯೇ ಆಗುತ್ತದೆ.)

ಸ್ಟೈಪೆಂಡರಿ ನೌಕರರು ತಾವು ಸಲ್ಲಿಸಿದ ಸೇವಾ ಅವಧಿಯಷ್ಟು–ಗರಿಷ್ಠ ೫ ವರ್ಷ–ರಿಯಾಯ್ತಿ ಪಡೆಯುತ್ತಾರೆ. (೫ ಕ್ಕಿಂತ ಹೆಚ್ಚು ವರ್ಷ ಕೆಲಸ ಮಾಡಿದವರಿಗೂ ರಿಯಾಯ್ತಿ ಐದೇ ವರ್ಷ.) ಕಳೆದ ವಾರ ರಾಜ್ಯ ಸಚಿವ ಸಂಪುಟದ ಸಭೆ ಈ ನಿರ್ಧಾರಗಳನ್ನು ಕೈಗೊಂಡಿದೆ.

ಅಗಳಗಂಡಿ ಪಂಚಾಯ್ತಿ ಮಟ್ಟದ ರೈತಸಂಘ ರಚನೆ

ಅಗಳಗಂಡಿ: ಇಲ್ಲಿ ಏ. ೮ ರಂದು ಪಂಚಾಯ್ತಿ ಮಟ್ಟದ ರೈತಸಂಘವನ್ನು ರಚಿಸಲಾಯಿತು. ಪದಾಧಿಕಾರಿಗಳು: ಹೆಚ್. ಎಲ್. ಗಣೇಶರಾವ್ (ಅಧ್ಯಕ್ಷ), ಎಂ. ಶಾಂತಪ್ಪಹೆಗ್ಗಡೆ, (ಉಪಾಧ್ಯಕ್ಷ), ಅಲ್ಫಾನ್ಸ್ ನರೋನ್ಹ (ಕಾರ್ಯದರ್ಶಿ), ಟಿ. ಎಂ. ನಟಶೇಖರ್, (ಸಹಕಾರ್ಯದರ್ಶಿ), ಹಾಗೂ ೧೭ ಜನ ಕಾರ್ಯಕಾರಿ ಸಮಿತಿ ಸದಸ್ಯರು.

ಕೊಪ್ಪ ತಾ|| ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು

ಕೊಪ್ಪ: ಕೊಪ್ಪಾ ತಾಲ್ಲೂಕಿನ ರಾಜ್ಯ ಸರ್ಕಾರಿ ನೌಕರರ ಸಂಘದ ೮೩-೮೪ನೇ ಸಾಲಿನ ಪದಾಧಿಕಾರಿಗಳಾಗಿ ಏ. ೫ ರಂದು ಈ ಕೆಳಕಂಡವರು ಆಯ್ಕೆಯಾಗಿದ್ದಾರೆ.

ರಾಮಣ್ಣ, ಟ್ರೆಜರಿ ಆಫೀಸರ್, ಕೊಪ್ಪ (ಅಧ್ಯಕ್ಷ), ಎಂ. ಎಸ್. ಕೃಷ್ಣಮೂರ್ತಿ, ಶಿಕ್ಷಕರು, ಅಗಳಗಂಡಿ (ಉಪಾಧ್ಯಕ್ಷ), ಕೆ. ಎಸ್. ಸುಬ್ರಹ್ಮಣ್ಯ, ಕಿರಿಯ ಕಾಲೇಜು, ಕೊಪ್ಪ (ಕಾರ್ಯದರ್ಶಿ), ನಸೀಮ್‌ಫಾತಿಮಾ, ಉರ್ದುಶಾಲೆ, ಕೊಪ್ಪ (ಸಹಕಾರ್ಯದರ್ಶಿ), ಮಹೇಶ್ವರಪ್ಪ, ಪುರಸಭೆ, ಕೊಪ್ಪ (ಖಜಾಂಚಿ), ಎ.ಪಿ. ಸುಬ್ಬಯ್ಯ, ಗ್ರಾಮಲೆಕ್ಕಿಗರು, ಕೊಪ್ಪ (ಸಂಘಟನಾ ಕಾರ್ಯದರ್ಶಿ).

ಸಾಮೂಹಿಕ ಉಪನಯನ

ಹರಿಹರಪುರ: ಕೊಪ್ಪ ತಾ|| ಬ್ರಾಹ್ಮಣ ಮಹಾಸಭೆ ಆಶ್ರಯದಲ್ಲಿ ಇಲ್ಲಿನ ಅಂಬಾಸದನದಲ್ಲಿ ಮೇ. ೨ರಂದು ಸಾಮೂಹಿಕ ಉಪನಯನ ಏರ್ಪಡಿಸಿದೆ. ಈ ಬಗ್ಗೆ ಅರ್ಜಿ ಫಾರಂಗಳನ್ನು ಸಭೆಯ ಕಚೇರಿ ಅಥವಾ ಅಂಬಾಸದನದಲ್ಲಿ ಮ. ೬ರಿಂದ ೬ರೊಳಗೆ ಪಡೆಯಬಹುದಾಗಿದ್ದು, ಅರ್ಜಿಗಳನ್ನು ಮೇಲ್ಕಂಡ ಸ್ಥಳಗಳಲ್ಲಿ ೨೩-೪-೮೩ ರೊಳಗೆ ಸಲ್ಲಿಸಬೇಕೆಂದು ಮಹಾಸಭೆಯು ಪ್ರಕಟಣೆ ತಿಳಿಸಿದೆ.

ಸಂಖ್ಯೆ, ಲಾ. 516: ಎಲ್‌ಸಿ, 83
ಎಲ್ ಆರ್ ಎಫ್ 6/82

ತಹಸೀಲ್ದಾರ್ ರವರ ಕಾರ್ಯಾಲಯ,
ಕೊಪ್ಪ ತಾಲ್ಲೋಕು, ಕೊಪ್ಪ,
ದಿನಾಂಕ: 5-4-1983.

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಉಪ ಕಾರ್ಯದರ್ಶಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಇಲಾಖೆ (ಭೂ ಸುಧಾರಣಾ ಘಟಕ) ಇವರು, ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಡ ಗೇಣಿದಾರರಿಗೆ ಉಚಿತ ಕಾನೂನು ನೆರವು ನೀಡುವ ಸಲುವಾಗಿ, ದಿನಾಂಕ: 21-4-83 ರ ಗುರುವಾರ ಕೊಪ್ಪ ಪ್ರವಾಸ ಕೈಗೊಂಡು ತಂಗುವರು ಹಾಗೂ ಕೊಪ್ಪ ತಾಲ್ಲೋಕು ಕಛೇರಿಯಲ್ಲಿ ಅರ್ಜಿ ಸ್ವೀಕರಿಸುವರು.

ವಾರ್ಷಿಕ ವರಮಾನ ಐದು ಸಾವಿರ ರೂಪಾಯಿಗಳಿಗೆ ಮೀರದ ಬಡ ಗೇಣಿದಾರರು, ಭೂ ನ್ಯಾಯ ಮಂಡಳಿ ತೀರ್ಪಿಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಹಾಕಲಿಚ್ಛಿಸಿದಲ್ಲಿ ಅಥವಾ ಅವರ ವಿರುದ್ಧ ಭೂ ಮಾಲೀಕರು ರಿಟ್ ಅರ್ಜಿ ದಾಖಲು ಮಾಡಿದ್ದು ಗೇಣಿದಾರರು ತಮ್ಮನ್ನು ಪ್ರತಿನಿಧಿಸಲು, ಇಚ್ಛಿಸಿದಲ್ಲಿ ಪ್ರಕರಣಕ್ಕೆ ಆಧಾರಿತವಾದ ದಾಖಲೆಗಳು ಇದ್ದಲ್ಲಿ, ಅವುಗಳು ಮತ್ತು ತಹಸೀಲ್ದಾರ್ ರಿಂದ ಪಡೆದ ವಾರ್ಷಿಕ ವರಮಾನದ ಸರ್ಟಿಫಿಕೇಟುಗಳೊಂದಿಗೆ ಮೇಲೆ ತಿಳಿಸಿದ ದಿನಾಂಕದಂದು ತಾಲ್ಲೋಕು ಕಚೇರಿ, ಕೊಪ್ಪದಲ್ಲಿ ಭೇಟಿ ಮಾಡಬಹುದು.

(ಸಹಿ)
ತಹಸೀಲ್ದಾರ್,
ಕೊಪ್ಪ ತಾಲ್ಲೋಕ್

ಸಂಪಾದಕ, ಮುದ್ರಕ ಪ್ರಕಾಶಕ: ಸಿರಿಮನೆ ನಾಗರಾಜ್, ದೀವಟಿಗೆ ಅಚ್ಚುಕೂಟ, ಕೊಪ್ಪ